ಎಂದು ಸಲಹೆ ನೀಡಿದ. ಬೇಂದ್ರೆ ಸರಿ ಎಂದರು. ಅಂತಹ ಮರೆವು ಅವರದು. ವಿಚಿತ್ರವೆಂದರೆ, ಒಮ್ಮೆ ಸರ್. ಎಂ. ವಿಶ್ವೇಶ್ವರಯ್ಯನವರು ಬರೆದಿದ್ದ ಒಂದು ಪುಸ್ತಕದ ಶೀರ್ಷಿಕೆಯನ್ನು ನಾನು ತಪ್ಪಾಗಿ "Prose Poetry Through Industry" ಎಂದು ಬೇಂದ್ರೆಯವರಿಗೆ ಹೇಳಿದೆ. ಸುಮಾರು ಹನ್ನೆರಡು ವರ್ಷಗಳ ನಂತರ ಒಮ್ಮೆ ಇದ್ದಕ್ಕಿದ್ದಂತೆ ಅದು "Prose Poetry Through Industry" ಅಲ್ಲ, "Prosperity through Industry" ಎಂದರು. ನಾನು ಆ ವಿಚಾರ ಪೂರ್ತಿ ಮರೆತೇಹೋಗಿದ್ದೆ.

ಗೋಕಾಕರ 'ಇಂದಿನ ಕರ್ನಾಟಕ' ಎಂಬ ಪುಸ್ತಕ Text ಆಗಿತ್ತು. ಅಷ್ಟೇನೂ ಒಳ್ಳೆಯ ಪುಸ್ತಕವಲ್ಲವದು. 'Text ಅಂದ್ರೆ ಬಹಳ ಕೆಟ್ಟಪುಸ್ತಕನೇ ಇಡುತ್ತಾರೆ. ಏಕೆಂದರೆ ಒಳ್ಳೆಯ ಪುಸ್ತಕಾನ ಜನ ಓದಿಯೇ ಇರುತ್ತಾರೆ. ಓದದ ಪುಸ್ತಕಗಳನ್ನು ಆಗಿ ಇಡುವುದರಿಂದ ಓದಲಿಕ್ಕೇ ಬೇಕು. ನಿನಗ Text ಬಿಟ್ಟು ಉಳಿದದ್ದನ್ನು ಕಲಿಸುತ್ತೀನಿ' ಎಂದು ಬೇರೇನೇ ಕಲಿಸಿದರು ಬೇಂದ್ರೆ ಮಾಸ್ತರು.

ಬೇಂದ್ರೆಯವರೊಡನೆ ನನಗೆ ತುಂಬಾ ಸಲಿಗೆ ಇತ್ತು. ಒಮ್ಮೆ 'ಗಾಥಾ ಸಪ್ತಶತಿ'ಯಲ್ಲಿನ ಒಂದು ಪದ್ಯ ನನಗೆ ಅಶ್ಲೀಲವೆಂದು ತೋರಿತು. ತೀ.ನಂ. ಶ್ರೀಕಂಠಯ್ಯನವರ 'ಭಾರತೀಯ ಕಾವ್ಯ ಮೀಮಾಂಸೆ'ಯಲ್ಲಿಯೂ ಆ ಪದ್ಯ ಅಚ್ಚಾಗಿದೆ. ಪತಿ ವ್ಯಾಪಾರಕ್ಕೆಂದು ದೂರದೇಶಕ್ಕೆಂದು ಹೋದಂತಹ ಸಂದರ್ಭದಲ್ಲಿ ಆತನ ಪತ್ನಿ ಪಥಿಕನೋರ್ವನಿಗೆ ತಾನು ಏಕಾಂಗಿ ಎಂಬುದನ್ನು ಸೂಚಿಸುವ ಪ್ರಸಂಗ. ಅದನ್ನು ಬೇಂದ್ರೆಯವರಿಗೆ ತಿಳಿಸಿದೆ. ಅವರು ಆ ಪ್ರಸಂಗವನ್ನು ಮತ್ತೊಂದು ರೀತಿಯಲ್ಲಿ ವಿಶ್ಲೇಷಿಸಿದರು. ಎಲ್ಲೆಲ್ಲಿ ಬದುಕು ವ್ಯಾಪಾರೀಕರಣ, ವಾಣಿಜ್ಯೀಕರಣವಾಗುತ್ತದೆಯೋ ಅಲ್ಲಿ ಈ ರೀತಿಯ ವಿಕೃತಿಗಳು ಸಹಜ, ಇದಕ್ಕೆ ಜಗತ್ತಿನ ಇತಿಹಾಸವೇ ಸಾಕ್ಷಿಯಾಗಿದೆ ಎಂದು ವಿವರಿಸಿದರು. ಇದು ಬೇಂದ್ರೆಯವರ ವಿಶ್ಲೇಷಣೆಯ ವೈಶಿಷ್ಟ್ಯ.

ಶೀಲ, ಅಶ್ಲೀಲ ಪ್ರಶ್ನೆಗೆ ನಮ್ಮ ಮನಸ್ಸು ಯಾವ ರೀತಿಯಲ್ಲಿ ಪ್ರತಿಕ್ರಿಯಿಸುತ್ತದೆ ಎಂಬುದರ ಮೇಲೆ ನಿರ್ಧಾರವಾಗುತ್ತದೆ ಎಂಬ ನಿಲುವು ಬೇಂದ್ರೆಯವರದು. ರಾಜಸೂಯ ಯಾಗದ ಸಂದರ್ಭ. ಒಂದು ಪ್ರಸಂಗ ಬಹಳಷ್ಟು ಮಹಾಭಾರತಗಳಲ್ಲಿ ಕಾಣಸಿಗುವುದಿಲ್ಲ. ದುರ್ಯೋಧನಾದಿಗಳು, ಪಾಂಡವರು ಊಟಕ್ಕೆ ಕುಳಿತಿದ್ದಾರೆ. ದ್ರೌಪದಿ ಬಡಿಸುತ್ತಿರುವಾಗ ಅವಳ ಕಂಚುಕ ಬಿಚ್ಚಿ ಹೋಗುತ್ತದೆ. ಕೈಯಲ್ಲಿದ್ದ ಪಾತ್ರೆಯನ್ನು ಕೆಳಗಿಡುವ ಹಾಗಿಲ್ಲ, ಅಂತಹ ಸಂದರ್ಭದಲ್ಲಿ ಕೃಷ್ಣ ದ್ರೌಪದಿಯ ಕಂಚುಕವನ್ನು ಕಟ್ಟುತ್ತಾನೆ. ತುಂಬಾ ಹೃದಯತಟ್ಟುವ ಸಂದರ್ಭ ಇದು. ಬಹಳಷ್ಟು ಮಹಾಭಾರತದ ಪ್ರತಿಗಳಲ್ಲಿ, ರೂಪಾಂತರಗಳಲ್ಲಿ ಈ ಪ್ರಸಂಗವೇಕೆ ಸಿಗುವುದಿಲ್ಲ ಎಂದೊಮ್ಮೆ ಬೇಂದ್ರೆಯವರನ್ನು ಕೇಳಿದೆ. ಅವರ ಉತ್ತರ ಅತ್ಯಂತ ಮಾರ್ಮಿಕವಾಗಿತ್ತು. 'ಧರ್ಮರಾಜನ ವೇಷದಲ್ಲಿ ಅನೇಕ ಬಾರಿ ದುರ್ಯೋಧನಾದಿಗಳಿರುತ್ತಾರೆ, ಅವರಿಗೆ ಇಂತಹ ಪ್ರಸಂಗವೂ ಅಪಾರ್ಥವಾಗಬಹುದು' ಎಂದರು.

ಮಹಾರಾಷ್ಟ್ರದಲ್ಲಿ 'ತಮಾಷಾ' ಎಂಬ ಕಾರ್ಯಕ್ರಮ ಬಹಳ ಜನಪ್ರಿಯ. ಸ್ವಲ್ಪಮಟ್ಟಿಗೆ ಅಶ್ಲೀಲವೆನ್ನಬಹುದಾದ ಪ್ರಸಂಗಗಳನ್ನೂ ಒಳಗೊಂಡಿರುವ 'ತಮಾಷಾ' ಸಭ್ಯ ಸಂಸ್ಕೃತಿಗೆ ಅನುಗುಣವಾಗಿ ಅಶ್ಲೀಲ ಪ್ರಸಂಗಗಳನ್ನು ಸಂಭಾಷಣೆಗಳನ್ನು ಹ್ರಸ್ವಗೊಳಿಸಿ ಪ್ರದರ್ಶಿಸುವುದುಂಟು. ಸಮ್ಮೇಳನವೊಂದಕ್ಕೆ ಬೇಂದ್ರೆಯವರೂ ಆಹ್ವಾನಿತರಾಗಿದ್ದರು. ಸಮ್ಮೇಳನದ ಆಯೋಜಕರು 'ಅಸಲ್‌ತಮಾಷಾ' ನೋಡಬೇಕೆಂದು ಅಪೇಕ್ಷಿಸಿ ಅದರಂತೆಯೇ